ಜಲಾಶಯದ ಎಫ್.ಆರ್.ಎಲ್. ಮಟ್ಟವು 406.4 ಮೀ. ಇದ್ದು ಸದರಿ ಕಡಣಿ ಬ್ಯಾರೇಜ್ ಸೊನ್ನೆ ಬ್ಯಾರೇಜಿನ ಹಿನ್ನಿರಿನಲ್ಲಿ ಸಂಪೂರ್ಣವಾಗಿ ಮುಳಗಡೆ ಆಗಿರುತ್ತದೆ. ಕಡಣಿ ಬ್ಯಾರೇಜ್ ಉದ್ದೇಶಿತ ನೀರಾವರಿ 10290 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಬ್ಯಾರೇಜ ಆಗಿ ನಿರ್ಮಿತವಾಗಿದ್ದ ಕಾರಣದಿಂದ ಸದರಿ ಬ್ಯಾರೇಜನ್ನು ಎತ್ತರಿಸುವ ಪ್ರಸ್ತಾವನೆಯು ಭೀಮಾ ಏತ ನೀರಾವರಿ ಯೋಜನೆಯ ಯೋಜನಾ ವರದಿಯಲ್ಲಿ ಇರಲಿಲ್ಲ.

ಈಗ ಮಾನ್ಯ ಶಾಸಕರು ಸದರಿ ಬ್ಯಾರೇಜ್ ಎತ್ತರಿಸುವ ಪ್ರಸ್ತಾವನೆ ಸಲ್ಲಿಸಿದ್ದು, ಮುಖ್ಯ ಇಂಜಿನಿಯರ್‌ರವರಿಂದ ವರದಿ ಕೋರಲಾಗಿದೆ. ಅವರ ವರದಿ ಬಂದ ನಂತರ, ಬ್ಯಾರೇಜ್ ಎತ್ತರಿಸುವ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ವನ್ಯ ಪ್ರಾಣಿಗಳ ಹಾವಳಿ ಮತ್ತು ಪರಿಹಾರ

363(617); ಶ್ರೀ ಚೆಲುವರಾಯಸ್ವಾಮಿ.ಎನ್. (ನಾಗಮಂಗಲ)

ಅ) ಕಳೆದ ಒಂದು ವರ್ಷದಿಂದ ಮಂಡ್ಯ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಚಿರತೆ ಹಾಗೂ ಇತರ ವನ್ಯಪ್ರಾಣಿಗಳ ಹಾವಳಿ ಕಂಡು ಬಂದಿದೆ; ಇದರಿಂದ ಆಗಿರತಕ್ಕ ಜೀವಹಾನಿ ಎಷ್ಟು; ಜೀವಹಾನಿ ಬಗ್ಗೆ ಪರಿಹಾರ ನೀಡಲಾಗಿದೆಯೇ;

ಆ) ಕೃಷ್ಣರಾಜಪೇಟೆ ತಾಲ್ಲೂಕು ಚಿಕ್ಕಕಳಲೆ ಗ್ರಾಮದಲ್ಲಿ ಚಿರತೆ ದಾಳಿಗೆ ಸಿಕ್ಕಿ ರೈತ ಮೃತಪಟ್ಟು 11 ತಿಂಗಳಾದರೂ ಇನ್ನೂ ಪರಿಹಾರ ನೀಡದೇ ಇರಲು ಕಾರಣಗಳೇನು; ಶೀಘ್ರವಾಗಿ ಪರಿಹಾರ ವಿತರಣೆ ಮಾಡಲಾಗುವುದೇ;

ಇ) ಚಿರತೆಯ ಸೆರೆಗೆ ಎಲ್ಲೆಲ್ಲಿ ಬೋನನ್ನು ಇಡಲಾಗಿದೆ; ಯಾವ ರೀತಿ ಕಾರ್ಯಾಚರಣೆ ಮಾಡಲಾಗಿದೆ?

ಶ್ರೀ ಬಿ. ರಾಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಮಂಡ್ಯ ಜಿಲ್ಲೆಯ ಕೆಳಕಂಡ ಗ್ರಾಮಗಳಲ್ಲಿ ವನ್ಯಪ್ರಾಣಿಗಳ ಹಾವಳಿ ಕಂಡು ಬಂದಿರುತ್ತದೆ.

ಮದ್ದೂರು ವಲಯ	ವಳಗೆರೆಹಳ್ಳಿ ಆನೆದೊಡ್ಡಿ, ಕೆ.ಹೊನ್ನಲಗೆರೆ, ಹೆಬ್ಬೆರಳು ಗ್ರಾಮಗಳಲ್ಲಿ
ಮಳ್ಳವಳ್ಳಿ ವಲಯ	ಕೆಂಪಯ್ಯನ ದೊಡ್ಡಿ, ಮಲ್ಲಿನಾಥಪುರ ಗ್ರಾಮಗಳಲ್ಲಿ
ಮಂಡ್ಯ ವಲಯ	ಹೊನಗಾನಹಳ್ಳಿ, ಸಾತನೂರು ಬೆಟ್ಟ, ಶಂಭೂನಹಳ್ಳಿ
ಶ್ರೀರಂಗಪಟ್ಟಣ ವಲಯ	ಬೆಳಗೋಳ
ಪಾಂಡವಪುರ ವಲಯ	ಕೆಂಚನಹಳ್ಳಿ, ಸಂಕನಹಳ್ಳಿ, ಚಿಕ್ಕಬೋಗನಹಳ್ಳಿ ಗ್ರಾಮಗಳಲ್ಲಿ
ನಾಗಮಂಗಲ ವಲಯ	ಜೋಡಿ ಚಿಕ್ಕನಹಳ್ಳಿ, ತಾವರೆಕೆರೆ, ಕೋಟೆಬೆಟ್ಟ, ಕೆಂದನಹಳ್ಳಿ ಗ್ರಾಮಗಳಲ್ಲಿ
ಕೆ.ಆರ್. ಪೇಟೆ ವಲಯ	ಚಿಕ್ಕಕಳಲೆ, ಕೃಷ್ಣಾಪುರ, ಕೊಟ್ಟಹಳ್ಳಿ ಗ್ರಾಮಗಳಲ್ಲಿ

ಕಳೆದ ಒಂದು ವರ್ಷದಿಂದ ಮಂಡ್ಯ ಜಿಲ್ಲೆಯಲ್ಲಿ ವನ್ಯಪ್ರಾಣಿ ದಾಳಿಯಿಂದ ಒಂದು ಮಾನವ ಪ್ರಾಣಹಾನಿ ಪ್ರಕರಣ ಸಂಭವಿಸಿರುತ್ತದೆ. ದಿನಾಂಕ:19–05–2014 ರಂದು ರಾತ್ರಿ 10–30ರ ಸಮಯದಲ್ಲಿ ಜಮೀನಿನಲ್ಲಿ ನೀರು ಕಟ್ಟುತ್ತಿರುವಾಗ ಕೆ.ಶಿವರಾಜು ಬಿನ್ ಮರಿಚಿಕ್ಕಕರಡೀಗೌಡ ಎಂಬುವರನ್ನು ಚಿರತೆಯು ಹಠಾತ್ತನೆ ದಾಳಿ ಮಾಡಿ ಜೀವಹಾನಿ ಮಾಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲೂಎಲ್ 2010 ಬೆಂಗಳೂರು ದಿನಾಂಕ:03–08–2011ರಂತೆ ಮೃತರ ಪತ್ನಿ ಶ್ರೀಮತಿ ಸಾವಿತ್ರಮ್ಮ ಕೋಂ ದಿವಂಗತ ಕೆ.ಶಿವರಾಜು ಬಿನ್ ಮರಿಚಿಕ್ಕಕರಡೀಗೌಡ ಇವರಿಗೆ ಘಟನೆ ನಡೆದ ದಿನದಂದು ₹ 3.00/– ಲಕ್ಷಗಳಿಗೆ ಚೆಕ್ ಸಂಖ್ಯೆ–154106 ದಿನಾಂಕ:20–05–2014 ಮತ್ತು ₹ 2.00/– ಲಕ್ಷಗಳಿಗೆ ಚೆಕ್ ಸಂಖ್ಯೆ – 010462 ದಿನಾಂಕ:11–06–2014 ರಂದು ಒಟ್ಟು ₹ 5.00 ಲಕ್ಷಗಳ ದಯಾತ್ಮಕಧನವನ್ನು ನೀಡಲಾಗಿರುತ್ತದೆ.

ಆ) ಕೃಷ್ಣರಾಜಪೇಟೆ ತಾಲ್ಲೂಕು, ಚಿಕ್ಕಕಳಲೆ ಗ್ರಾಮದಲ್ಲಿ ಚಿರತೆ ದಾಳಿಗೆ ಸಿಕ್ಕಿ ರೈತ ಮೃತಪಟ್ಟ ಎಂಬ ಸುದ್ದಿಯು ಪ್ರಚಲಿತವಾಗಿದ್ದು ಆದರೆ, ದಿನಾಂಕ: 11–09–2013 ರಂದು ರಾತ್ರಿ ಸಮಯದಲ್ಲಿ ಸಾವಿಗೀಡಾದ ವ್ಯಕ್ತಿ ದಿವಂಗತ ಸ್ವಾಮೀಗೌಡ ಬಿನ್ ಚಿಕ್ಕೇಗೌಡ ಇವರ ಶವ ಪರೀಕ್ಷೆ ವರದಿಯಲ್ಲಿ ವೈದ್ಯಾಧಿಕಾರಿಗಳು, ಕೆ.ಆರ್.ಪೇಟೆ ಸರ್ಕರಿ ಆಸ್ಪತ್ರೆಯವರು ನೀಡಿರುವ ಶವ ಪರೀಕ್ಷಾ ವರದಿಯನ್ವಯ ಮೃತರ ಸಾವು ವನ್ಯಪ್ರಾಣಿ ದಾಳಿಯಿಂದ ಆಗಿಲ್ಲದಿರುವುದರಿಂದ, ಹೃದಯಕ್ಕೆ ಸಂಬಂಧಿಸಿದ ತೊಂದರೆಯಿಂದ (Vagal inhibition and Cardiovascular Pathology) ಮೃತ್ತಪಟ್ಟಿರುವರೆಂದು ವೈದ್ಯಕೀಯ ಶವಪರೀಕ್ಷಾ ವರದಿಯಿಂದ ದೃಢಪಟ್ಟಿರುವುದರಿಂದ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಂಡ್ಯ ವಿಭಾಗ ಮದ್ದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಚಿರತೆಯನ್ನು ಸೆರೆ ಹಿಡಿಯಲು ಮೇಲಾಧಿಕಾರಿಗಳ ಸಲಹೆ ಸೂಚನೆ ಪಡೆದು ಹಾಗೂ ಚಿರತೆ ಹಿಡಿಯಲು ವಿವಿಧ ಮಾರ್ಗೋಪಾಯಗಳನ್ನು ಅನುಸರಿಸಿ ಚಿರತೆಯು ಕಂಡ ಸ್ಥಳಗಳಲ್ಲಿ ಕೂಡಲೇ ವಲಯ ಅರಣ್ಯಾಧಿಕಾರಿಗಳ ಮತ್ತು ಕ್ಷೇತ್ರ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿ ಈ ಕೆಳಕಂಡ ತಾಲ್ಲೂಕಿನ ಗ್ರಾಮಗಳಲ್ಲಿ ಪಂಜರಗಳನ್ನು (Cage) ಇಟ್ಟು ಅಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಗಳು ಮತ್ತು ಡಿಎಆರ್. ಪೋಲೀಸ್ ಸಹಾಯವನ್ನು ಪಡೆದು ಹಗಲು ರಾತ್ರಿ ಇಲಾಖಾ ವಾಹನಗಳಲ್ಲಿ ಚಿರತೆ

ಕಂಡ ಸ್ಥಳಗಳಲ್ಲಿ ಗಸ್ತು ಮಾಡುತ್ತಿರುತ್ತಾರೆ. ಚಿರತೆಯು ಕಂಡಕೂಡಲೇ ಸಹಾಯಕ ಪಡೆಯಲು ಸದರೀ ಗ್ರಾಮಸ್ಥರಿಗೆ ಅರಣ್ಯ ಅಧಿಕಾರಿಯವರ ದೂರವಾಣಿ/ಸಂಪರ್ಕ ವಿವರಗಳನ್ನು ನೀಡಲಾಗಿರುತ್ತದೆ. ಚಿರತೆಯು ಇರುವ ಸ್ಥಳಗಳಲ್ಲಿ ಚಿರತೆಯು ಓಡಾಡುವುದನ್ನು ಪತ್ತೆ ಮಾಡಲು ಕ್ಯಾಮರಾ ಟ್ರಾಪ್ಸ್‌ಗಳನ್ನು ಬಂಡೀಪುರ ವನ್ಯಜೀವಿ ವಿಭಾಗದಿಂದ ತರಿಸಿಕೊಂಡು ಅಲ್ಲಲ್ಲಿ ಅಳವಡಿಸಲಾಗಿದೆ ಹಾಗೂ ವನ್ಯಜೀವಿ ವಿಭಾಗಗಳಿಂದ ವಾಹನಗಳನ್ನು ಹಾಗೂ ಚಿರತೆಯನ್ನು Tranquilize ಮೂಲಕ ಸೆರೆಹಿಡಿಯಲು ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಚಿರತೆಯನ್ನು ಸೆರೆಹಿಡಿಯಲು ಕಾರ್ಯಾಚರಣೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಿಂದ ಕರೆಸಿರುವ 10 ಜನ ಎಸ್‌ಟಿಎಫ್‌ರವರ ನೆರೆವಿನೊಂದಿಗೆ ಹಳ್ಳಿ ಹಳ್ಳಿಗಳಲ್ಲಿ ಗಸ್ತು ಮಾಡಲಾಗಿದೆ. ಹಾಗೆಯೇ ಸರ್ಕಾರೇತರ ಸಂಸ್ಥೆ (ಎನ್‌ಜಿಓ)/ಸ್ಥಳೀಯ ರೈತ ಮುಖಂಡರು/ಸ್ವಯಂ ಸೇವಕರ ಸಹಭಾಗಿತ್ವದಲ್ಲಿ ಕಾರ್ಯತಂತ್ರ ರೂಪಿಸಲಾಗಿದ್ದು, ಇದರಿಂದ ಜನರ ಭಯಭೀತಿ ದೂರವಾಗಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಮಂಡ್ಯ ವಿಭಾಗದಲ್ಲಿ ಹಾಲಿ ಇರುವ ಬೋನುಗಳನ್ನು ಈ ಕೆಳಕಂಡ ತಾಲ್ಲೂಕಿನ ಗ್ರಾಮಗಳಲ್ಲಿ ಚಿರತೆ ಹಿಡಿಯಲು ಇಡಲಾಗಿದೆ.

ಮದ್ದೂರು ವಲಯ:	ವಳಗೆರೆಹಳ್ಳಿ, ಸೊಳ್ಳೇಪುರ
ಮಳವಳ್ಳಿ ವಲಯ:	ಕೊನ್ನಾಪುರ,
ಮಂಡ್ಯ ವಲಯ:	ಕೀಲಾರ
ಪಾಂಡವಪುರ ವಲಯ:	ಕುಂತಿಬೆಟ್ಟ
ನಾಗಮಂಗಲ ವಲಯ:	ಬೆಳ್ಳೂರು, ಮುದಗೆರೆ
ಕೆ.ಆರ್.ಪೇಟೆ ವಲಯ:	ಸಂತೆ ಬಾಚಳ್ಳಿ